ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು	ಶ್ರೀಮತಿ ಎಸ್.ವೀಣಾ ಅಚ್ಚಯ್ಯ (ವಿಧಾನ ಸಭೆಯಿಂದ ಚುನಾಯಿತರಾದವರು)
ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	1886
ಉತ್ತರಿಸಬೇಕಾದ ದಿನಾಂಕ	15.03.2022
ಉತ್ತರಿಸಬೇಕಾದ ಸಚಿವರು	ನಗರಾಭಿವೃದ್ಧಿ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಕೊಡಗು ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ (ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ) ವ್ಯಾಪ್ತಿಯಲ್ಲಿ ಯುಜಿಡಿ ಕಾಮಗಾರಿಯನ್ನು ಸಂಪೂರ್ಣವಾಗಿ ಅನುಷ್ಠಾನಗೊಳಿಸಲಾಗಿದೆಯೆ ;	ಕೊಡಗು ಜಿಲ್ಲೆಯಲ್ಲಿ ಒಟ್ಟು 4 ಸ್ಥಳೀಯ ಸಂಸ್ಥೆಗಳಿದ್ದು, ಮಡಿಕೇರಿ ನಗರಸಭೆ ಹಾಗೂ ಕುಶಾಲನಗರ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಮಂಡಳಿ ವತಿಯಿಂದ ಒಳಚರಂಡಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿದೆ. ಸೋಮವಾರಪೇಟೆ ಮತ್ತು ವಿರಾಜಪೇಟೆ ಪಟ್ಟಣ ಪಂಚಾಯತಿಗಳಲ್ಲಿ ಯುಜಿಡಿ ಕಾಮಗಾರಿಯನ್ನು ಮಂಡಳಿವತಿಯಿಂದ ಕೈಗೊಳ್ಳಲಾಗಿರುವುದಿಲ್ಲ. ಆದರೆ, ಪ್ರಸ್ತುತ ಸೋಮವಾರಪೇಟೆ ಮತ್ತು ವಿರಾಜಪೇಟೆ ಪಟ್ಟಣದಲ್ಲಿ ಉತ್ಪತ್ತಿಯಾಗುವ ಮಲಿನ ನೀರನ್ನು FSSM ಮಾದರಿಯಲ್ಲಿ ಶುದ್ಧೀಕರಿಸಲು ಡಿ.ಪಿ.ಆರ್‌ನ್ನು ತಯಾರಿಸಲು ಸೋಮವಾರಪೇಟೆ ಮತ್ತು ವಿರಾಜಪೇಟೆ ಪಟ್ಟಣ ಪಂಚಾಯಿತಿಗೆ ಪೌರಾಡಳಿತ ನಿರ್ದೇಶನಾಲಯದಿಂದ ಪತ್ರ ಸಂಖ್ಯೆ 26629/ ಡಿಎಂಎ/ 02/ ಎಫ್.ಎಸ್.ಎಸ್.ಎಂ/ ಎಸ್.ಡಬ್ಲ್ಯೂ.ಎಂ /2018-19 ದಿ: 08-01-2021 ರಲ್ಲಿ ನಿರ್ದೇಶನ ನೀಡಲಾಗಿರುತ್ತದೆ.
ಆ)	ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಯುಜಿಡಿ ಕಾಮಗಾರಿಯನ್ನು ಸಂಪೂರ್ಣವಾಗಿ ಇದುವರೆಗೆ ಅನುಷ್ಠಾನಗೊಳಿಸಲಾಗದಿದ್ದಲ್ಲಿ ಕಾರಣಗಳೇನು ;	ಮಡಿಕೇರಿ ನಗರಸಭೆ ಮತ್ತು ಕುಶಾಲನಗರ ಪಟ್ಟಣ ಪಂಚಾಯಿತಿ ವ್ಯಾಪ್ತಿಯಡಿ ಕಾಮಗಾರಿಯನ್ನು ಕೈಗೊಳ್ಳಲಾಗಿದ್ದು, ಯೋಜನೆಯ ಕೆಲವು ಕಾಮಗಾರಿಗಳಿಗೆ ಬೇಕಾದ ಜಮೀನನ್ನು ಮಡಿಕೇರಿ ನಗರಸಭೆಯಿಂದ ಹಾಗೂ ಕುಶಾಲನಗರ ಪಟ್ಟಣ ಪಂಚಾಯಿತಿಯಿಂದ ಹಸ್ತಾಂತರಿಸುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. ಈ ಕಾರಣದಿಂದ ಕಾಮಗಾರಿಯನ್ನು ಸಂಪೂರ್ಣವಾಗಿ ಅನುಷ್ಠಾನಗೊಳಿಸಲು ಸಾಧ್ಯವಾಗಿರುವುದಿಲ್ಲ, **ವಿವರಗಳು** ಕೆಳಕಂಡಂತಿವೆ.

		1. ಮಡಿಕೇರಿ ನಗರದ ಒಳಚರಂಡಿ ಯೋಜನೆ: ಸದರಿ ಯೋಜನೆಯಡಿ ಇದುವರೆಗೂ 109 ಕಿಮೀ ಸೀವರ್ ಕೊಳವೆ ಮಾರ್ಗಗಳ ಪೈಕಿ 69 ಕಿ.ಮೀ ಉದ್ದದ ಕೊಳವೆ ಸಾಲುಗಳನ್ನು ಅಳವಡಿಸಲಾಗಿರುತ್ತದೆ. ಸದರಿ ಯೋಜನೆಯಡಿ ಉಳಿಕೆ ಕಾಮಗಾರಿಗಳಾದ 3 ವೆಟ್ ವೆಲ್, 9 ಸೆಪ್ಟಿಕ್ ಟ್ಯಾಂಕ್ ಗಳು, ಮಲಿನ ನೀರು ಶುದ್ಧೀಕರಣ ಘಟಕಕ್ಕೆ ಸಂಪರ್ಕ ಕಲ್ಪಿಸಲು ಅವಶ್ಯವಿರುವ ಜಮೀನನ್ನು ಮಡಿಕೇರಿ ನಗರಸಭೆ ವತಿಯಿಂದ ಹಸ್ತಾಂತರಿಸದೆ ಇರುವ ಕಾರಣದಿಂದಾಗಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸಾಧ್ಯವಾಗಿರುವುದಿಲ್ಲ. **2. ಕುಶಾಲನಗರ ಪಟ್ಟಣದ ಒಳಚರಂಡಿ ಯೋಜನೆ:** ಕುಶಾಲನಗರ ಒಳಚರಂಡಿ ಯೋಜನೆಯಡಿ 72.0 ಕಿಮೀ ಉದ್ದದ ಸೀವರ್ ಕೊಳವೆಮಾರ್ಗಗಳನ್ನು ಜುಲೈ-2017ರಲ್ಲಿ ಅಳವಡಿಸಿ ಪೂರ್ಣಗೊಳಿಸಲಾಗಿರುತ್ತದೆ. ಆದರೆ ಯೋಜನೆಯಡಿ ಅನುವು ಮಾಡಲಾಗಿದ್ದ ಮಲಿನ ನೀರು ಶುದ್ಧೀಕರಣ ಘಟಕದ ನಿರ್ಮಾಣಕ್ಕೆ ಅವಶ್ಯವಿರುವ ಜಾಗವನ್ನು ಪಟ್ಟಣ ಪಂಚಾಯತಿ ಕುಶಾಲನಗರ ವತಿಯಿಂದ ಮಾರ್ಚ್ 2020ರಲ್ಲಿ ಹಸ್ತಾಂತರಿಸಲಾಗಿರುತ್ತದೆ. ಅದರಂತೆ ಕುಶಾಲನಗರ ಪಟ್ಟಣದ 4 ವಲಯಗಳ ಪೈಕಿ ವಲಯ-1 ನ್ನು (ಗುಮ್ಮನಕೊಲ್ಲಿ ಪ್ರದೇಶ) ಹೊರತುಪಡಿಸಿ, ವಲಯ -2, 3 ಮತ್ತು 4 ನ್ನು ಚಾಲನೆಗೊಳಿಸಲು ಅವಶ್ಯವಿರುವ ಬಾಕಿ ಕಾಮಗಾರಿಗಳನ್ನು ಕೈಗೊಳ್ಳಲು ಟೆಂಡರ್‌ನ್ನು ಅಕ್ಟೋಬರ್-2020 ರಲ್ಲಿ ವಹಿಸಿಸಲಾಗಿದ್ದು, ಪ್ರಸ್ತುತ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಸದರಿ ಯೋಜನೆಯಲ್ಲಿ ವಲಯ-1ರ ಕಾಮಗಾರಿಗಳನ್ನು ಚಾಲನೆಗೊಲಿಸಲು 1 ಸಂಖ್ಯೆ ವೆಟ್ ವೆಲ್ ನಿರ್ಮಾಣ ಮಾಡಬೇಕಾಗಿದ್ದು, ಸದರಿ ಜಮೀನಿನ ಭೂಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. ಸದರಿ ಜಮೀನನ್ನು ಪಟ್ಟಣ ಪಂಚಾಯಿತಿ ಕುಶಾಲನಗರ ರವರಿಂದ ಹಸ್ತಾಂತರಿಸಿದ ನಂತರ ಯೋಜನೆಯನ್ನು ಪೂರ್ಣವಾಗಿ ಚಾಲನೆಗೊಳಿಸಲಾಗುವುದು.

ಇ)	ಕಳೆದ ಮೂರು ವರ್ಷಗಳಲ್ಲಿ ಸದರಿ ಯುಜಿಡಿ ಕಾಮಗಾರಿಗಳಿಗೆ ವಿನಿಯೋಗಿಸಿರುವ ಅನುದಾನವೆಷ್ಟು; (ಸಂಪೂರ್ಣ ವಿವರ ನೀಡುವುದು)	1. **ಮಡಿಕೇರಿ ನಗರದ ಒಳಚರಂಡಿ ಯೋಜನೆ:** ➢ ಅನುಮೋದಿತ ಅಂದಾಜು ಮೊತ್ತ : ರೂ.49.56 ಕೋಟಿಗಳು ➢ ವಿನಿಯೋಗಿಸಿದ ಮೊತ್ತ : (ಕಳೆದ 3 ವರ್ಷಗಳಲ್ಲಿ) 2019-20 : ರೂ. 1.42 ಕೋಟಿಗಳು 2020-21 : ರೂ. 0.73 ಕೋಟಿಗಳು 2021-22 : ರೂ. 0.0050 ಕೋಟಿಗಳು **ಈವರೆಗಿನ ವೆಚ್ಚ ಒಟ್ಟು : ರೂ. 27.34 ಕೋಟಿಗಳು** 2. **ಕುಶಾಲನಗರ ಪಟ್ಟಣದ ಒಳಚರಂಡಿ ಯೋಜನೆ:** ➢ ಅನುಮೋದಿತ ಅಂದಾಜು ಮೊತ್ತ : ರೂ.40.10 ಕೋಟಿಗಳು ➢ ಪರಿಷ್ಕೃತ ಅಂದಾಜು ಮೊತ್ತ: ರೂ: 71.60 ಕೋಟಿಗಳು ➢ ವಿನಿಯೋಗಿಸಿದ ಮೊತ್ತ : (ಕಳೆದ 3 ವರ್ಷಗಳಲ್ಲಿ) 2019-20 : ರೂ. 1.07 ಕೋಟಿಗಳು 2020-21 : ರೂ. 1.06 ಕೋಟಿಗಳು 2021-22 : ರೂ. 2.20 ಕೋಟಿಗಳು **ಈವರೆಗಿನ ವೆಚ್ಚ ಒಟ್ಟು : ರೂ.44.85 ಕೋಟಿಗಳು**
ಈ)	ಯಾವ ಕಾಲಮಿತಿಯೊಳಗೆ ಜಿಲ್ಲೆಯ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಯುಜಿಡಿ ವ್ಯವಸ್ಥೆಯನ್ನು ಸಂಪೂರ್ಣವಾಗಿ ಅನುಷ್ಠಾನಗೊಳಿಸಲಾಗುವುದು :	1. **ಮಡಿಕೇರಿ ನಗರದ ಒಳಚರಂಡಿ ಯೋಜನೆ:** ಸದರಿ ಯೋಜನೆಯಡಿ ಅನುವು ಮಾಡಲಾಗಿರುವ 3 ಸಂಖ್ಯೆ ವೆಟ್ ವೆಲ್, 9 ಸಂಖ್ಯೆ ಸೆಪ್ಟಿಕ್ ಟ್ಯಾಂಕ್ ಗಳು, ಮಲಿನ ನೀರು ಶುದ್ಧೀಕರಣ ಘಟಕಕ್ಕೆ ಸಂಪರ್ಕ ಕಲ್ಪಿಸಲು ಅವಶ್ಯವಿರುವ ಜಾಗಗಳನ್ನು ಮಡಿಕೇರಿ ನಗರಸಭೆ ವತಿಯಿಂದ ಹಸ್ತಾಂತರಿಸಿದ ನಂತರ ಹಾಗೂ ಬಾಕಿ ಉಳಿದ 40ಕಿ.ಮೀ ಉದ್ದದ ಕೊಳವೆ ಮಾರ್ಗಗಳನ್ನು ಅಳವಡಿಸಲು ಕಾಂಕ್ರೀಟ್ ಹಾಗೂ ಡಾಂಬರು ರಸ್ತೆಗಳನ್ನು ಅಗೆಯಲು ಸಾರ್ವಜನಿಕರ ತಕರಾರನ್ನು ಬಗೆಹರಿಸಲು ಜಿಲ್ಲಾಡಳಿತ, ಕೊಡಗು ಜಿಲ್ಲೆ ಹಾಗೂ ಮಡಿಕೇರಿ ನಗರಸಭೆ ರವರಿಗೆ ಕೋರಲಾಗಿದೆ. ಸದರಿ ಅಡಚಣೆಯನ್ನು ಬಗೆಹರಿಸಿದ ನಂತರ, ಒಂದು ವರ್ಷದ ಅವಧಿಯೊಳಗೆ ಮಲಿನ ನೀರು ಶುದ್ಧೀಕರಣ ಘಟಕದ ಕಾಮಗಾರಿಯನ್ನು ಪೂರ್ಣಗೊಳಿಸಿ ಚಾಲನೆಗೊಳಿಸಲಾಗುವುದು.

		2. **<u>ಕುಶಾಲನಗರ ಪಟ್ಟಣದ ಒಳಚರಂಡಿ ಯೋಜನೆ:</u>** ಸದರಿ ಯೋಜನೆಯಡಿ ಪ್ಯಾಕೇಜ್-2ರ ಕಾಮಗಾರಿಯು ಪ್ರಗತಿಯಲ್ಲಿದ್ದು, ಜುಲೈ-2022ರೊಳಗೆ ವಲಯ-2, 3 ಮತ್ತು 4ನ್ನು ಪೂರ್ಣಗೊಳಿಸಿ, ಚಾಲನೆ ಮಾಡಲಾಗುವುದು. ಮುಂದುವರೆದು, ಒಳಚರಂಡಿ ಯೋಜನೆಯಡಿ ವಲಯ-1ರ ಕಾಮಗಾರಿಗಳನ್ನು ಚಾಲನೆಗೊಳಿಸಲು ವೆಟ್ ವೆಲ್-1 ರ ಜಮೀನನ್ನು ಪಟ್ಟಣ ಪಂಚಾಯಿತಿ, ಕುಶಾಲನಗರ ವತಿಯಿಂದ ಹಸ್ತಾಂತರಿಸಿದ ನಂತರ ಕಾಮಗಾರಿಗೆ ಟೆಂಡರ್ ಆಹ್ವಾನಿಸಿ ಕಾಮಗಾರಿಯನ್ನು ಕೈಗೊಳ್ಳಲಾಗುವುದು.

ಸಂಖ್ಯೆ: ನಅಇ 61 ಯುಎಂಎಸ್ 2022

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು